# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 173 | Pages. 2 | Date: 16-05-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 173 - ಪುಟಗಳು : 2 - 16 ಮೇ 2025 ಶುಕ್ರವಾರ Ph: 8762954248 ದರ : ₹1


# ಸಾರ್ವಜನಿಕ ಸಮಸ್ಯೆಗೆ ಸ್ಪಂದನೆ ಅಧಿಕಾರಿಗಳ ಕರ್ತವ್ಯ


## ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ | ಜಿ.ಪಂ. ಕಚೇರಿಯಲ್ಲಿ ಇಂದು ವಿಚಾರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಾರ್ವಜನಿಕರು ಯಾವುದಾದರು ಕೆಲಸಕ್ಕೆ ಬಂದಾಗ ಅವರೊಂದಿಗೆ ಸೌಜನ್ಯದಿಂದ ವರ್ತಿಸಿ ಸಮಸ್ಯೆಗೆ ಪರಿಹಾರ ಕಲ್ಪಿಸುವುದು ಅಧಿಕಾರಿಗಳ ಆದ್ಯ ಕರ್ತವ್ಯ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹೇಳಿದರು. ಹಾಸನಾಂಬ ಕಲಾಕ್ಷೇತ್ರದಲ್ಲಿ ಗುರುವಾರ ಸಾರ್ವಜನಿಕರ ಕುಂದು ಕೊರತೆ ದೂರು ಸ್ವೀಕಾರ, ವಿಚಾರಣೆ ಹಾಗೂ ವಿಲೇವಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೊದಲ ದಿನವಾದ ಗುರುವಾರ 240 ಜನರಿಗೆ ಟೋಕನ್ ನೀಡಲಾಗಿತ್ತು. ಅದರಲ್ಲಿ 180 ಅರ್ಜಿ ಸ್ವೀಕರಿಸಲಾಗಿದೆ. ಉಳಿದ ಅರ್ಜಿಗಳನ್ನು ಶುಕ್ರವಾರ ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದರು.

ಈಗಾಗಲೇ ಲೋಕಾಯುಕ್ತದಲ್ಲಿರುವ ಪ್ರಕರಣಗಳಲ್ಲಿ ಆಯ್ದ ಪ್ರಕರಣಗಳನ್ನು ಶುಕ್ರವಾರ ಕೈಗೆತ್ತಿಕೊಳ್ಳಲಾಗುವುದು. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅರ್ಜಿಗಳ ವಿಚಾರಣೆ ನಡೆಸಿ ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿದರು.

ಸರ್ಕಾರಿ ನೌಕರರಿಗೆ ರಾಜ್ಯ ಲೋಕಾಯುಕ್ತ ಸಂಸ್ಥೆಯ ಕಾಯ್ದೆಗಳ ಕುರಿತು ಪರಿಚಯ ಮಾಡಿಕೊಡುವುದಕ್ಕಾಗಿ ಹಾಗೂ ಅವರಿಗೂ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣಾತ್ಮಕ ಅವಕಾಶಗಳಿವೆ ಎಂಬುದನ್ನು ತಿಳವಳಿಕೆ ನೀಡಲು ರಾಜ್ಯಾದ್ಯಂತ ಕಾರ್ಯಕ್ರಮ ಆಯೋಜಿಸುತ್ತೇವೆ. ಸಾರ್ವಜನಿಕ ಸಮಸ್ಯೆಗೆ ಸಂಬಂಧಿಸಿದ ಕೆಲವು ಪ್ರಕರಣಗಳನ್ನು ತಾಂತ್ರಿಕ ತನಿಖೆಯ ಮೂಲಕ ಪರಿಹಾರ ನೀಡಬೇಕಾಗಿರುವುದರಿಂದ ಅಂತಹವುಗಳಲ್ಲಿ ಕೆಲವು ಸಮಸ್ಯೆಗಳಿಗೆ ಪರಿಹಾರ ನೀಡುವಂತಹ ಪ್ರಕರಣಗಳನ್ನು ಕುರಿತ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಮುಂಚಿತವಾಗಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ತಿಂಗಳ ಮುಂಚೆಯೇ ಅವುಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ. ಆ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನವನ್ನು ಅಧಿಕಾರಿಗಳು ಮಾಡುತ್ತಾರೆ ಎಂದರು.




### ಉಪಲೋಕಾಯುಕ್ತರ ದಿಢೀರ್ ಭೇಟಿ

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಗುರುವಾರ ಬೆಳಿಗ್ಗೆ ನಗರದ ವಿವಿಧೆಡೆ ದಿಢೀರ್ ಭೇಟಿ ಮೂಲಕ ವ್ಯವಸ್ಥೆ ಪರಿಶೀಲಿಸಿದರು.

ನಗರದ ಹುಣಸಿನಕೆರೆ, ಸತ್ಯಮಂಗಲ ಕೆರೆಗೆ ಭೇಟಿ ನೀಡಿ ಸ್ವಚ್ಛತೆ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕೆರೆ ಅಭಿವೃದ್ಧಿಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಹಾಗೂ ವೆಚ್ಚ ಮಾಡಿರುವ ವಿವರಗಳನ್ನು ಒದಗಿಸುವಂತೆ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಕೆರೆಗೆ ಕಲುಷಿತ ನೀರು ಸೇರ್ಪಡೆ ಆಗದಂತೆ ತಡೆಯಲು ನಿಗಾ ವಹಿಸಲು ನಿರ್ದೇಶನ ನೀಡಿದರು. ನಗರದ ಮಹಾರಾಜಾ ಪಾರ್ಕ್‌ಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಿದರು.

### 40 ಜಿಲ್ಲಾ ನ್ಯಾಯಾಧೀಶರು

ಲೋಕಾಯುಕ್ತ ಸಂಸ್ಥೆಯಲ್ಲಿ 40 ಜಿಲ್ಲಾ ನ್ಯಾಯಾಧೀಶರಿದ್ದಾರೆ. ಅದರಲ್ಲಿ ಕೆಲವರು ಸೀನಿಯರ್ ನ್ಯಾಯಾಧೀಶರು, ಜೂನಿಯರ್ ನ್ಯಾಯಾಧೀಶರಿದ್ದಾರೆ. ಐದರಿಂದ ಆರು ಸಾವಿರ ಜನರು ಕರ್ನಾಟಕ ರಾಜ್ಯದಲ್ಲಿ ಸಿಬ್ಬಂದಿ ಇದ್ದಾರೆ. ಅದರಲ್ಲಿ ತಾಂತ್ರಿಕ ವರದಿಯನ್ನು ನೀಡುವುದಕ್ಕಾಗಿ ಪ್ರತ್ಯೇಕವಾಗಿ ಎಂಜಿನಿಯರ್‌ಗಳಿದ್ದಾರೆ. ಜೊತೆಗೆ ನಮ್ಮದೇಯಾದ ಪೊಲೀಸ್ ಸಿಬ್ಬಂದಿ ಇದ್ದಾರೆ. ಲೆಕ್ಕಪತ್ರಗಳ ವಿಚಾರಣೆಗೆ ಲೆಕ್ಕಪತ್ರ ಶಾಖೆ ಇದೆ. ಒಬ್ಬರು ಲೋಕಾಯುಕ್ತರು ಹಾಗೂ ಇಬ್ಬರು ಉಪ ಲೋಕಾಯುಕ್ತರು ನಮ್ಮ ಸಂಸ್ಥೆಯಲ್ಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಪರ ನಿಬಂಧಕರಾದ ಪೃಥ್ವಿರಾಜ್ ವರ್ಣೇಕರ್, ಕರ್ನಾಟಕ ಲೋಕಾಯುಕ್ತದ ಕಾನೂನು ಅಭಿಪ್ರಾಯ 2 ಸಹಾಯಕ ನಿಬಂಧಕ ಬಿ. ಶುಭವೀರ, ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಕೆ. ದಾಕ್ಷಾಯಿಣಿ, ಸಿವಿಲ್ ನ್ಯಾಯಾಧೀಶ ಕಿರಣ್ ಪಿ.ಎಂ. ಪಾಟೀಲ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲ ಉಪಸ್ಥಿತರಿದ್ದರು.

> ಸಮಾಜದ ಪ್ರತಿಯೊಬ್ಬರಿಗೂ ಸಮಾನ ಅವಕಾಶ ತಲುಪಬೇಕು ಎನ್ನುವುದು ಸಂವಿಧಾನದ ಆಶಯ. ಆ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕೆಲಸ ಮಾಡಬೇಕು. ಸಾರ್ವಜನಿಕರ ಸಮಸ್ಯೆಯನ್ನು ಹತ್ತಿರದಿಂದ ಅರಿಯಲು ಜಿಲ್ಲಾ ಪ್ರವಾಸ ಕೈಗೊಳ್ಳಲಾಗಿದೆ.
>
> - ಕೆ.ಎನ್. ಫಣೀಂದ್ರ, ಉಪ ಲೋಕಾಯುಕ್ತ ನ್ಯಾಯಮೂರ್ತಿ



### ಸಂವಿಧಾನ ಆಶಯ ಈಡೇರಲಿ

ಸಂವಿಧಾನ ಪ್ರತಿಯೊಬ್ಬರು ಉತ್ತಮ ಜೀವನ ನಡೆಸುವುದಕ್ಕಾಗಿ ಅನೇಕ ಕಾನೂನುಗಳನ್ನ ರೂಪಿಸಿದೆ. ಅವುಗಳನ್ನು ಹೇಗೆ ತಲುಪಿಸಬೇಕು ಎಂಬುದನ್ನು ಸರ್ಕಾರಿ ನೌಕರರಿಗೆ ತಿಳಿಸಿಕೊಟ್ಟಿದೆ. ಜನಸಾಮಾನ್ಯರಿಗೆ ಹಕ್ಕು ಬಾಧ್ಯತೆಯನ್ನುಕೊಡುವ ಸಲುವಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು ಅಧಿಕಾರವನ್ನುಕೊಡುವ ಸಲುವಾಗಿ ಹಾಗೂ ಆ ಹಕ್ಕುಗಳನ್ನು ಎಲ್ಲಿ ಚಲಾಯಿಸಬೇಕು ಅದಕ್ಕೋಸ್ಕರ ನ್ಯಾಯಾಲಯಗಳು ಸರ್ಕಾರಿ ಕಚೇರಿಗಳು ಇವುಗಳೆಲ್ಲವನ್ನು ಕಾನೂನಿನ ಚೌಕಟ್ಟಿನಲ್ಲಿ ಮಾಡಿಕೊಂಡಿದ್ದೇವೆ. ಪ್ರತಿಯೊಬ್ಬರು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು.

ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯಕೇಂದ್ರ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ತೆರೆದಿದೆ. ಅಂಬುಲೆನ್ಸ್ ವ್ಯವಸ್ಥೆಯನ್ನು ಮಾಡಲಾಗಿದೆ. ಅವಶ್ಯಕತೆ ಇದ್ದರೆ ಸ್ಥಳಕ್ಕೆ ಆಗಮಿಸಿ ಚಿಕಿತ್ಸೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ ಎಂದರಲ್ಲದೆ, ಉತ್ತಮವಾದ ರಸ್ತೆ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಅವರು ತಿಳಿಸಿದರು.

## ಆರ್ಥಿಕ ಕಾರಣದಿಂದ ಕದನ ವಿರಾಮ: ಸಂಸದ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪಾಕಿಸ್ತಾನದ ವಿರುದ್ಧ ಯುದ್ಧ ನಡೆದಿದ್ದರೆ ಭಾರತೀಯ ಸೇನೆ ನಿರಾಯಾಸವಾಗಿ ಗೆಲ್ಲುತ್ತಿತ್ತು. ಆರ್ಥಿಕ ಉದ್ದೇಶದಿಂದ ಕದನ ವಿರಾಮಕ್ಕೆ ಕೇಂದ್ರ ಸರ್ಕಾರ ಸಮ್ಮತಿ ಸೂಚಿಸಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಪರೇಷನ್ ಸಿಂಧೂರ ಪ್ರತೀಕಾರದ ಸವಿನೆನಪಿಗಾಗಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಭಾಗವಹಿಸಿದ್ದ ಅವರು ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ದೇಶದ ಜನ ಭಯೋತ್ಪಾದನೆ ವಿರುದ್ಧ ನಿಲ್ಲಬೇಕಿದೆ. ರಾಹುಲ್‌ಗಾಂಧಿ ಅವರ ಸೂಚನೆಯಂತೆ ಕೇಂದ್ರ ಸರ್ಕಾರದ ಎಲ್ಲಾ ನಿರ್ಧಾರಕ್ಕೆ ಬೆಂಬಲ ಕೊಟ್ಟಿದ್ದೇವೆ. ಭಯೋತ್ಪಾದನೆ ನಿಗ್ರಹಕ್ಕೆ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಕ್ಕೆ ಸಾಮೂಹಿಕವಾಗಿ ನಮ್ಮ ಬೆಂಬಲ ಇರುತ್ತದೆ. ರಾಹುಲ್ ಗಾಂಧಿ ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗುತ್ತೇವೆ ಎಂದರು.

ಪ್ರತಿಯೊಬ್ಬರೂ ಭಯೋತ್ಪಾದನೆ ವಿರುದ್ಧ ಹೋರಾಡಬೇಕು. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಸೈನಿಕರು ಭಯೋತ್ಪಾದನೆ ವಿರುದ್ಧ ಹೋರಾಡಿ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಅವರಿಗೆ ನಮನ ಸಲ್ಲಿಸುವುದು ಇಂದಿನ ಕಾರ್ಯಕ್ರಮದ ಉದ್ದೇಶ. ಭಾರತದ ವಿರುದ್ಧ ಯಾರು, ಏನೇ ಷಡ್ಯಂತ್ರ ಮಾಡಿದರೂ, ಅವರನ್ನು ಹಣಿಯಲು ಪಕ್ಷಾತೀತವಾಗಿ ನಾವು ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡುತ್ತೇವೆ. ಸೈನ್ಯಕ್ಕೆ ಇನ್ನಷ್ಟು ಶಕ್ತಿ ತುಂಬಲಿ ಎಂದು ಆಶಿಸಿದರು.

### ಅಮೆರಿಕ ಮಧ್ಯಸ್ಥಿಕೆ ಏಕೆ..?

ಭಾರತ-ಪಾಕಿಸ್ತಾನ ನಡುವೆ ಅಮೇರಿಕಾ ಮಧ್ಯಸ್ಥಿಕೆ ವಹಿಸುವ ಬದಲು ಪ್ರಧಾನಿ ಮೋದಿ ಅವರೇ ಒಳ್ಳೆಯ ನಿರ್ಧಾರ ತೆಗೆದುಕೊಳ್ಳಬಹುದಿತ್ತು. ಅಮೆರಿಕ ಶಹಬ್ಬಾಸ್‌ಗಿರಿ ತೆಗೆದುಕೊಳ್ಳುವಂತಹದ್ದು ಏನಿತ್ತು ಎಂದು ಪ್ರಶ್ನಿಸಿದರು.

ಇದು ಪ್ರತಿಷ್ಠೆ, ಅಳಿವು-ಉಳಿವಿನ ಪ್ರಶ್ನೆ, ಭಾರತವಾಗಿರಬಹುದು, ಪಾಕಿಸ್ತಾನಕ್ಕೆ ಆಗಿರಬಹುದು ಅಮೆರಿಕ ಮಧ್ಯಸ್ಥಿಕೆ ವಹಿಸಿ ಅವರಿಗೆ ಹೆಸರು ಕೊಡುವ ಅಗತ್ಯವಿರಲಿಲ್ಲ. ಯುದ್ಧದಲ್ಲಿ ಎಷ್ಟೋ ಮಂದಿ ಸೈನಿಕರು ಹುತಾತ್ಮರಾಗಿದ್ದಾರೆ, ಅವರು ಕುಟುಂಬದವರನ್ನು ಕಳೆದುಕೊಂಡಿದ್ದಾರೆ ಅಂತಹದ್ದರಲ್ಲಿ ಇವರು ಏಕಾಏಕಿ ಯುದ್ಧವನ್ನು ನಿಲ್ಲಿಸಿ ಅಮೇರಿಕಾದವರಯ ಹೆಸರು ತೆಗೆದುಕೊಳ್ಳುವುದು ಅನವಶ್ಯಕ ಎಂದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಈ ಬಗ್ಗೆ ರಾಷ್ಟ್ರೀಯ, ರಾಜ್ಯ ನಾಯಕರು ತೀರ್ಮಾನ ತೆಗೆದುಕೊಳ್ಳುತ್ತಾರೆ ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ, ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಮಾಧ್ಯಮದ ಮುಂದೆ ಹೇಳಿಕೆ ನೀಡಬಾರದೆಂದು ನಮಗೆ ಹೈಕಮಾಂಡ್ ಕಟ್ಟಪ್ಪನೆ ಹೊರಡಿಸಿದ್ದಾರೆ. ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದರು.

## ಐಟಿ ಕ್ಷೇತ್ರದಲ್ಲಿ ಅರ್ಜುನ್ ಗುರುದೇವ್ ಶಿಖರ ಸಾಧನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಉಪಾಧ್ಯಕ್ಷ ಅರ್ಜುನ್ ಗುರುದೇವ್ ಅವರು ಕೇವಲ ಆಡಳಿತ ಮಾತ್ರಲ್ಲದೆ ಜಾಣ್ಮೆಯಿಂದ ಐಟಿ ಕ್ಷೇತ್ರದಲ್ಲಿ ಗುರುತರ ಸಾಧನೆಯ ಮೂಲಕ ತಂತ್ರಜ್ಞಾನ ಯುಗಕ್ಕೆ ತಮ್ಮದೇಯಾದ ಕೊಡುಗೆ ನೀಡುತ್ತಿದ್ದಾರೆ.

ಐಟಿ ಮತ್ತು ತಂತ್ರಜ್ಞಾನ ವೃತ್ತಿಪರ, ಡಿಜಿಟಲ್ ಪರಿವರ್ತನೆ, ಎಂಟರ್‌ಪ್ರೈಸ್ ತಂತ್ರಜ್ಞಾನ ತಂತ್ರ ಯೋಜನೆ ಹಾಗೂ ತಂತ್ರಜ್ಞಾನ ಪರಿಹಾರಗಳ ವಿಶ್ಲೇಷಣದಲ್ಲಿ ವಿಶೇಷ ಪರಿಣತಿ ಹೊಂದಿದ್ದಾರೆ. ವೃತ್ತಿ ಜೀವನದಲ್ಲಿ ಅವರು ಜಾಗತಿಕ ಮಟ್ಟದಲ್ಲಿ ಐಟಿ ಇನ್ಫ್ರಾಸ್ಟ್ರಕ್ಚರ್ ನಿರ್ವಹಣೆ, ಹೊಸ ತಂತ್ರಜ್ಞಾನಗಳ ಅಳವಡಿಕೆ ಮತ್ತು ನಾವೀನ್ಯತೆ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಐಟಿ ತಂತ್ರಾಂಶ, ಐಟಿ ಸಲಹೆಗಾರಿಕೆ ಮತ್ತು ಕೃತಕ ಬುದ್ಧಿಮತ್ತೆಯ (ಎಐ) ಆಧಾರಿತ ಅಪ್ಲಿಕೇಶನ್‌ಗಳಲ್ಲಿನ ಪರಿಣತಿ ಅವರನ್ನು ತಂತ್ರಜ್ಞಾನ ಕ್ಷೇತ್ರದ ಮುಖ್ಯ ವಿಚಾರಕರಾಗಿ ಮಾಡಿದೆ.



### ಉತ್ತಮ ಸಂಘಟಕ

ಎಲ್ಲಾ ಕ್ಷೇತ್ರದಲ್ಲೂ ಅರ್ಜುನ್ ಗುರುದೇವ್ ಅವರ ಕೊಡುಗೆಯನ್ನು ಕಾಣಬಹುದಾಗಿದೆ. ತಮ್ಮ ವಿದ್ವತ್ತು, ಚಾಣಾಕ್ಷತನ, ಸಂಯಮ ಹಾಗೂ ಪರಿಶ್ರಮದಿಂದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಉಪಾಧ್ಯಕ್ಷರಾಗಿ ಪರಿಶ್ರಮ ಮತ್ತು ವಿದ್ಯಾ ಸಂಸ್ಥೆಗಳ ನಡುವಿನ ಸಹಭಾಗಿತ್ವವನ್ನು ಉತ್ತೇಜಿಸುವ ಜೊತೆಗೆ ತಾಂತ್ರಿಕ ಶಿಕ್ಷಣದ ವೃದ್ಧಿಗೆ ತಮ್ಮದೇಯಾದ ಕೊಡುಗೆ ನೀಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನವನ್ನು ಮಾತ್ರವಲ್ಲದೆ, ಹೊಸ ತಂತ್ರಜ್ಞಾನಗಳ ಬೆಳವಣಿಗೆಯಲ್ಲಿ ಮುನ್ನಡೆಸಲು ಅಗತ್ಯವಿರುವ ಸಾಮರ್ಥ್ಯಗಳನ್ನು ಕಲ್ಪಿಸುವುದು ಅವರ ಗುರಿಯಾಗಿದೆ.

### ಮೋಟಾರ್ ಸ್ಪೋರ್ಟ್ಸ್ ಕ್ರೇಜ್

ಐಟಿ ಕ್ಷೇತ್ರದ ಹೊರತಾಗಿಯೂ, ಅರ್ಜುನ್ ಮೋಟಾರ್ ಸ್ಪೋರ್ಟ್ಸ್ ಕ್ಷೇತ್ರದಲ್ಲಿ ಅಪಾರ ಆಸಕ್ತಿ ಹೊಂದಿದ್ದು, ರಾಷ್ಟ್ರೀಯ ಮಟ್ಟದ ರ್ಯಾಲಿಂಗ್, ಟ್ರ್ಯಾಕ್ ರೇಸಿಂಗ್ ಮತ್ತು ಡ್ರ್ಯಾಗ್ ರೇಸಿಂಗ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಅವರ XenReality Technologies ಸಂಸ್ಥೆಯು ಭಾರತದಲ್ಲಿ ರೇಸಿಂಗ್‌ನ ಭವಿಷ್ಯ ರೂಪಿಸಲು ಮತ್ತು ಶಾಶ್ವತ ಮೋಟಾರ್‌ಸ್ಪೋರ್ಟ್ಸ್‌ನ ಕ್ರಾಂತಿಯತ್ತ ಹೆಜ್ಜೆಯಾಗಿದೆ.

ಅವರು XenReality Technologies ಸಂಸ್ಥೆಯ ಸಹ-ಸ್ಥಾಪಕರಾಗಿದ್ದು, ದೃಶ್ಯ ಪರಿಹಾರಗಳನ್ನು ಅಭಿವೃದ್ಧಿಪಡಿಸುವತ್ತ ಗಮನ ಹರಿಸುತ್ತಿದ್ದಾರೆ.

## ಸೇತುವೆ ಮೇಲೆಯೇ ನಿಂತ ಬಸ್: ಪರದಾಟ



ಸಕಲೇಶಪುರ: ಹೆತ್ತೂರು ಹಾಗೂ ಯಸಳೂರು ಸಂಪರ್ಕಿಸುವ ರಸ್ತೆಯ ಐಗೂರು ಗ್ರಾಮದ ಸೇತುವೆ ಮೇಲೆ ಗುರುವಾರ ಸಕಲೇಶಪುರ ಡಿಪೋ ಬಸ್ ಕೆಟ್ಟು ನಿಂತ ಪರಿಣಾಮ ಪ್ರಯಾಣಿಕರು ತೊಂದರೆ ಅನುಭವಿಸಿದರು ಮಾತ್ರವಲ್ಲದೆ ಇಡೀ ದಿನ ಸಂಚಾರ ಬಂದ್ ಆಗಿತ್ತು.

ತಾಲ್ಲೂಕಿನ ಯಸಳೂರು ಹಾಗೂ ಹೆತ್ತೂರು ಹೋಬಳಿ ಕೇಂದ್ರಗಳನ್ನು ಸಂಪರ್ಕಿಸುವ ಐಗೂರು ಸೇತುವೆ ಅತ್ಯಂತ ಹಳೆಯದಾಗಿರುವುದಲ್ಲದೆ ಬಹಳ ಕಿರಿದಾಗಿದೆ. ಏಕಮುಖ ಸಂಚಾರಕ್ಕೆ ಮಾತ್ರ ಇಲ್ಲಿ ಅವಕಾಶವಿದೆ. ಸಕಲೇಶಪುರ ಸಾರಿಗೆ ಘಟಕಕ್ಕೆ ಸೇರಿದ ಬಸ್ ಸೇತುವೆ ಮೇಲೆ ಕೆಟ್ಟು ನಿಂತ ಪರಿಣಾಮ ಬೆಳಿಗ್ಗೆಯಿಂದ ಸಂಜೆ ವರೆಗೆ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ನಂತರ ಹರಸಾಹಸ ಮಾಡಿ ಬಸ್‌ನ್ನು ಸೇತುವೆಯಿಂದ ರಸ್ತೆಗೆ ತರಲಾಯಿತು.

ಸುಸ್ಥಿತಿಯಲ್ಲಿಲ್ಲದ ಬಸ್‌ಗಳ ಸಂಚಾರದಿಂದ ಸಮಸ್ಯೆ ಮರುಕಳಿಸುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಸುಸಜ್ಜಿತ ಬಸ್‌ಗಳನ್ನು ನೀಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಪಿಸ್ತೂಲ್‌ನೊಂದಿಗೆ ಸುತ್ತಾಟ: ಆತಂಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ 80 ಅಡಿ ರಸ್ತೆಯಲ್ಲಿ ಯುವಕನೊಬ್ಬ ಪಿಸ್ತೂಲ್ ಜೊತೆಗೆ ಸಂಚರಿಸಿದ್ದು ಆತಂಕಕ್ಕೆ ಎಡೆಮಾಡಿಕೊಟ್ಟಿದೆ.

ಅಪರಿಚಿತ ಯುವಕನನ್ನು ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಗ್ರಾಮದವ ಎನ್ನಲಾಗಿದೆ. ಸ್ಥಳೀಯರೊಂದಿಗೆ ಗಲಾಟೆ:

ಬುಧವಾರ ಸಂಜೆ ನಂಬರ್ ಪ್ಲೇಟ್ ಇಲ್ಲದ ಕಾರಿನಲ್ಲಿ 80 ಅಡಿ ರಸ್ತೆಯಲ್ಲಿ ಸಂಚರಿಸಿರುವ ಆತ ಎಡಭಾಗದಲ್ಲಿ ಕುಳಿತು ಪಿಸ್ತೂಲ್ ಪ್ರದರ್ಶಿಸಿದ್ದಾನೆ. ಕಾರಿನ ಹಿಂದೆಯೇ ಬೈಕ್‌ನಲ್ಲಿ ತೆರಳುತ್ತಿದ್ದ ಯುವಕರು ಅದನ್ನು ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ. 80 ಅಡಿ ರಸ್ತೆಯಿಂದ ಆರ್‌ಎಂಸಿ ಯಾರ್ಡ್ ಕಡೆ ತೆರಳಿರುವ ಕಾರು ಬೇಕರಿ ಬಳಿ ನಿಂತಿತು. ಹಿಂದಿನಿಂದ ಬರುತ್ತಿದ್ದವರು ಗಾಬರಿಯಾಗಿ ಕೈಯಲ್ಲಿ ಗನ್ ಹಿಡಿದು ಏಕೆ ತಿರುಗುತ್ತಿದ್ದೀರಿ ಎಂದು ಪ್ರಶ್ನಿಸಿದ್ದಾರೆ. ಆಗ ಕಾರಿನಲ್ಲಿದ್ದವರು, ಇದು ಆಟಿಕೆಯ ಪಿಸ್ತೂಲು ಸುಮ್ಮನೆ ವಿಡಿಯೋ ಮಾಡಿಕೊಳ್ಳುತ್ತಿದ್ದೇವೆ ಎಂದಿದ್ದಾರೆ. ಆದರೆ ಪಿಸ್ತೂಲ್ ಹಿಡಿದಿದ್ದವನು ಯುವಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಗಲಾಟೆ ಮಾಡಿದ್ದಾನೆ. ಹಿಂಬಾಲಿಸಿಕೊಂಡು ಬಂದವರ ಮೇಲೆ ಹಲ್ಲೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ.



ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹಂಚಿಕೆಯಾಗುತ್ತಿದ್ದಂತೆ ಎಚ್ಚೆತ್ತ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ವಿಡಿಯೋ ಮಾಡಿದವರನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಿದ್ದಾರೆ. ಯುವಕನ ಪತ್ತೆಗಾಗಿ ಒಂದು ತಂಡ ಅರಕಲಗೂಡಿಗೆ ತೆರಳಿದೆ. ಆತನ ಹೆಸರು ತಿಳಿದುಬಂದಿಲ್ಲ. ಈ ಮೊದಲು ಯಾವ ದೂರು ಆತನ ವಿರುದ್ಧ ದಾಖಲಾಗಿಲ್ಲ. ರೀಲ್ಸ್‌ಗಾಗಿ ಆಟಿಕೆ ಪಿಸ್ತೂಲ್ ಪ್ರದರ್ಶಿಸಿರಬಹುದು ಎಂದು ಪೊಲೀಸರು ಹೇಳಿದ್ದಾರೆ.

## ಹೆಲ್ಮೆಟ್ ಹಾಕದೆ ಟ್ರ್ಯಾಕ್ಟರ್ ಓಡಿಸಿದ್ದಕ್ಕೆ ದಂಡ!

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸರಿಯಾಗಿ 10-20 ಕಿ.ಮೀ. ದೂರ ಕೂಡ ಆರಾಮವಾಗಿ ಕ್ರಮಿಸಲು ಸಾಧ್ಯವಾಗದ ಟ್ರ್ಯಾಕ್ಟರನ್ನು ನೂರಾರು ಕಿಲೋ ಮೀಟರ್ ದೂರದ ಮೈಸೂರು ಜಿಲ್ಲೆಯ ಊಟಿ ರಸ್ತೆಯಲ್ಲಿ ಹೆಲ್ಮೆಟ್ ಹಾಕದೆ ಚಾಲನೆ ಮಾಡಿದ ಅಪರಾಧಕ್ಕಾಗಿ ಕೆಪಿಸಿಸಿ ಸದಸ್ಯ ಯಡೆಹಳ್ಳಿ ಆರ್. ಮಂಜುನಾಥ್ ಅವರಿಗೆ 500 ರೂ. ದಂಡ ಪಾವತಿಸುವಂತೆ ಪೊಲೀಸ್ ಇಲಾಖೆ ನೋಟಿಸ್ ನೀಡಿದೆ!

ಹೌದು!, ಇದು ಪೊಲೀಸ್ ಇಲಾಖೆ ಮಾಡಿರುವ ಯಡವಟ್ಟು. ಮೇ 8 ರಂದು ಸಂಜೆ 4 ಗಂಟೆಯಲ್ಲಿ ಯಲಚಾಗರೆಬಾರೆಯ ವೃತ್ತದಲ್ಲಿ ಊಟಿ ಕಡೆಗೆ ಕೆಎ18ಟಿ1006 ನೋಂದಣಿ ಸಂಖ್ಯೆಯ ವಾಹನವನ್ನು ಹೆಲ್ಮೆಟ್ ಧರಿಸದೆ ಚಾಲನೆ ಮಾಡಿದ್ದಕ್ಕಾಗಿ 500 ರೂ. ದಂಡ ಪಾವತಿಸಿ ಕಾನೂನು ಕ್ರಮದಿಂದ ಪಾರಾಗಿ ಎಂದು ಇ ಪಾವತಿ ಚಲನ್ ಲಿಂಕ್ ಮೂಲಕ ಆರ್. ಮಂಜುನಾಥ್ ಅವರ ಮೊಬೈಲ್‌ಗೆ ಸಂದೇಶ ಬಂದಿದೆ.



ಇದನ್ನು ಕಂಡು ಯಡೇಹಳ್ಳಿ ಆರ್. ಮಂಜುನಾಥ್ ಅಚ್ಚರಿಗೊಳಗಾಗಿದ್ದಾರೆ. ನೋಟಿಸ್‌ನಲ್ಲಿ ನಮೂದಾಗಿರುವ ವಾಹನ ಸಂಖ್ಯೆ ಸರಿಯಾಗಿಯೇ ಇದೆ. ಆದರೆ ಅದು ಕಾಫಿ ಬೆಳೆಗಾರರಾಗಿರುವ ಅವರು ತೋಟದ ಕೆಲಸಕ್ಕೆ ಬಳಸುವ ಟ್ರ್ಯಾಕ್ಟರ್ ಊಟಿ ಕಡೆಗೆ ಹೋಗಿದ್ದು ಹೇಗೆ ಮತ್ತು ಟ್ರ್ಯಾಕ್ಟರ್ ಓಡಿಸಲು ಹೆಲ್ಮೆಟ್ ಏಕೆ ಹಾಕಬೇಕು ಎನ್ನುವುದು ಗೊತ್ತಾಗದೆ ಗೊಂದಲಕ್ಕೀಡಾಗಿದ್ದಾರೆ.

ಈ ಬಗ್ಗೆ ವಿವರಣೆ ಕೋರಿ ಪೊಲೀಸ್ ಇಲಾಖೆಯ ಇ ಮೇಲ್ ಕಳುಹಿಸುವುದಾಗಿ ತಿಳಿಸಿದ್ದಾರೆ. ಈಗ ವಾಹನ ಸಂಖ್ಯೆ ನಮೂದು ಮಾಡಿದರೆ ಅದು ಯಾವ ವಾಹನ ಎನ್ನುವ ಮಾಹಿತಿ ಮೊಬೈಲ್ ಆ್ಯಪ್ ನಲ್ಲಿಯೇ ದೊರೆಯುತ್ತದೆ. ಪೊಲೀಸರು ನೋಟಿಸ್ ಜಾರಿ ಮಾಡುವ ಮುನ್ನ ಅದನ್ನಾದರೂ ಗಮನಿಸದಿರುವುದು ಡಿಜಿಟಲ್ ಆಡಳಿತ ವ್ಯವಸ್ಥೆ ಬಗ್ಗೆಯೇ ಅನುಮಾನ ಮೂಡುವಂತೆ ಮಾಡುತ್ತದೆ.

## ಸುಹಾಸ್ ಶೆಟ್ಟಿ ಕೊಲೆ ಆರೋಪಿ ಬಂಧನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಂಗಳೂರಿನ ರೌಡಿ ಶೀಟರ್, ಹಿಂದು ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆ ಪ್ರಕರಣ ಸಂಬಂಧ ಹಾಸನದಲ್ಲಿದ್ದ ವ್ಯಕ್ತಿಯೊಬ್ಬನನ್ನು ಮಂಗಳೂರು ಸಿಸಿಬಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಟ್ವಾಳ ತಾಲ್ಲೂಕು ಫರಂಗಿಪೇಟೆಯ ಕುಂಪನಮಜಲು ಮೂಲದ ನೌಷಾದ್ ಯಾನೆ ಚೊಟ್ಟೆ (39) ಬಂಧಿತ ಆರೋಪಿ. ನಗರದ ಕೆ.ಆರ್. ಪುರಂನ ಬಾಡಿಗೆ ಮನೆಯಲ್ಲಿದ್ದ ನೌಷಾದ್, ಮಹಿಳಾ ಪೊಲೀಸ್ ಠಾಣೆ ಎದುರಿನಲ್ಲಿ ಮಂಗಳೂರು ಶೈಲಿಯ ಮೀನಿನ ಖಾದ್ಯಗಳು ಹೆಸರಿನ ಹೋಟೆಲ್ ಹಾಗು ಜ್ಯೂಸ್ ಸೆಂಟರ್ ನಡೆಸಿಕೊಂಡಿದ್ದ. ಸುಹಾಸ್ ಶೆಟ್ಟಿ ಕೊಲೆ ಬಳಿಕ ಹೋಟೆಲ್ ಬಾಗಿಲು ಹಾಕಲಾಗಿದೆ. ಈತನ ಹೆಂಡತಿ ಸಹ ಬಟ್ಟೆ ವ್ಯಾಪಾರಿಯಾಗಿದ್ದಾರೆ.

ನೌಷಾದ್ ವಿರುದ್ಧ ಸುರತ್ಕಲ್, ಬಜ್ಪೆ, ಮೂಡುಬಿದಿರೆ, ಮಂಗಳೂರು, ಉತ್ತರ ಬಂಟ್ವಾಳ ಗ್ರಾಮಾಂತರ ಠಾಣೆಗಳಲ್ಲಿ ಕೊಲೆ, ಕೊಲೆ ಯತ್ನ, ದರೋಡೆಗೆ ಸಂಚು ಸೇರಿ 6 ಪ್ರಕರಣ ದಾಖಲಾಗಿದೆ.

### ಬಸ್ ಹತ್ತುವಾಗ ಚಿನ್ನದ ಸರ ಕಳವು

ಅರಸೀಕೆರೆ: ಬಸ್ ಹತ್ತುವಾಗ ನೂಕುನುಗ್ಗಲಿನಲ್ಲಿ ಕಿಡಿಗೇಡಿಗಳು ಮಹಿಳೆಯ ಕೊರಳಿಂದ 35 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ಜಾವಗಲ್‌ನಲ್ಲಿ ಬುಧವಾರ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆ ಲಕ್ಯಾ ಹೋಬಳಿ ಸಿಂದಿಗೆರೆ ಗ್ರಾಮದ ಚಂದ್ರಮ್ಮ ಅವರು ಬೆಂಗಳೂರಿನಿಂದ ಜಾವಗಲ್‌ಗೆ ಬಂದಿದ್ದರು. ಅಲ್ಲಿಂದ ತಮ್ಮ ಊರಿಗೆ ಹೋಗಲು ಚಿಕ್ಕಮಗಳೂರು ಮಾರ್ಗದ ಬಸ್ ಹತ್ತುವಾಗ ಯಾರೋ ಕೊರಳಿಂದ ಸರ ಕದ್ದಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




ಹಾಸನ: ಕೃಷಿ ಕಾರ್ಯ ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿನ ಮುಂಚೂಣಿ ಸಾಧನೆಗಾಗಿ ಜಿಲ್ಲೆಯ ನವೀನ್ ಹೊನ್ನೇಗೌಡ ಅವರಿಗೆ ಇನ್ನೋವೇಟಿವ್ ಯಂಗ್ ಅಚೀವರ್ಸ್ ಪ್ರಶಸ್ತಿ ದೊರೆತಿದೆ.

ಸಿಲೋ ಫಾರ್ಚೂನ್ ಕಂಪನಿಯ ಸಂಸ್ಥಾಪಕ ಸಿಇಒ ನವೀನ್ ಹೊನ್ನೇಗೌಡ ಅವರು ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನಿಂದ ಆಯೋಜಿಸಿದ್ದ 67ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದರು.

# ಮುಸುಕಿನ ಜೋಳ ಬೆಳೆಗೆ ಕಾಡುತ್ತಿದೆ ರೋಗ ಬಾಧೆ

## ರೈತ ಸಂಪರ್ಕ ಅಧಿಕಾರಿಗಳಿಂದ ಸಲಹೆ ಪಡೆಯಿರಿ | ನಿರ್ಲಕ್ಷ್ಸಿಸಿದರೆ ನಷ್ಟ ಖಚಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮುಸುಕಿನ ಜೋಳ ಬೆಳೆಗೆ ಸೈನಿಕ ಹುಳುವಿನ ಬಾಧೆ ಜೊತೆಗೆ ಕೇದಿಗೆ ರೋಗ ಹೆಚ್ಚಾಗಿ ಕಂಡುಬಂದಿದ್ದು, ರೈತರು ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಕೃಷಿ ಇಲಾಖೆ ಜಂಟಿ ಉಪನಿರ್ದೇಶಕ ಪಿ. ರಮೇಶ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಮುಸುಕಿನ ಜೋಳ ಬೆಳೆ ಬೆಳೆಯುವ ಪ್ರದೇಶ ವಿಸ್ತರಣೆಯಾಗುತ್ತಲೇ ಇದೆ. ಆದರೆ, ಬೆಳೆ ಪರಿವರ್ತನೆ ಕೈಗೊಳ್ಳದೆ ಏಕ ಬೆಳೆ ಪದ್ಧತಿ ಅನುಸರಿಸುತ್ತಿರುವ ಕಾರಣ ಮುಸುಕಿನ ಜೋಳ ಬೆಳೆಯಲ್ಲಿ ರೋಗ, ಕೀಟ ಬಾಧೆ ಉಲ್ಬಣಗೊಳ್ಳುತ್ತಿದೆ. ರೈತರು ಇತರೆ ಬೆಳೆಗಳು ಬೆಳೆಯುವ ಜಾಗದಲ್ಲೆ ಮುಸುಕಿನ ಜೋಳ ಬೆಳೆಯನ್ನು ಕೈಗೊಳ್ಳುತ್ತಿರುವುದರಿಂದ ಕಳೆದ ನಾಲ್ಕೈದು ವರ್ಷದಲ್ಲಿ ಸೈನಿಕ ಹುಳುವಿನ ಬಾಧೆ ಜೊತೆಗೆ ಕೇದಿಗೆ ರೋಗ ಸಹ ಹೆಚ್ಚಾಗಿ ಕಂಡುಬಂದಿದೆ. ಆದ್ದರಿಂದ ರೈತರು ಹತೋಟಿ ಕ್ರಮಗಳನ್ನು ಕೈಗೊಳ್ಳುವಂತೆ ಕೃಷಿ ಇಲಾಖೆ ಅಧಿಕಾರಿಗಳು ಎಚ್ಚರಿಸಿದ್ದಾರೆ.



### ಸೈನಿಕ ಹುಳು ನಿಯಂತ್ರಣ

ಈ ಕೀಟವು ಮೆಕ್ಕೆಜೋಳ ಬೆಳೆ ಅಲ್ಲದೇ ಭತ್ತ, ಹೈಬ್ರೀಡ್ ಜೋಳ, ರಾಗಿ ಮುಂತಾದ ಬೆಳೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮುಖ್ಯವಾಗಿ ಬೆಳೆಯ ಎಲೆ, ಕಾಂಡ, ತೆನೆಯ ಭಾಗವನ್ನು ಕೆರೆದು ತಿನ್ನುವುದಲ್ಲದೇ, ಎಲೆಯ ಭಾಗದಲ್ಲಿ ಸರಣಿ ತೂತುಗಳನ್ನು ಕೊರೆಯುತ್ತದೆ. ಒಂದು ಚಿಟ್ಟೆಯು 1500 ಮೊಟ್ಟೆಯವರಗೆ ತತ್ತಿಗಳನ್ನಿಟ್ಟು, ಬೆಳೆಗಳಿಗೆ ತೀರ್ವ ಹಾನಿ ಮಾಡುತ್ತದೆ. ಇದಕ್ಕೆ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿದಲ್ಲಿ ಕೀಟವನ್ನು ಸಂಪೂರ್ಣವಾಗಿ ಹತೋಟಿ ಮಾಡಬಹುದು. ಕೀಟವನ್ನು ನಿರ್ವಹಣೆ ಮಾಡಲು (ಶೇ.10-20ರಷ್ಟು ಹಾನಿಯಾಗಿದ್ದಲ್ಲಿ) ಎಮೊಮೆಕ್ಟಿನ್ ಬೆಂಜೊಯೇಟ್ 0.4 ಗ್ರಾ ಅಥವಾ ಸ್ಪೈನೋಟೋರಮ್ 1ಮಿ.ಲೀ ಅಥವಾ ಕ್ಲೋರೋಂಟ್ರಾನಿಲಿಪ್ರೋಲ್ 0.4 ಮಿ ಲೀ ಅಥವಾ ಥಯೋಡಿಕಾರ್ಬ್ ನೀರಿಗೆ ಬೆರೆಸಿ ಔಷಧಿಯ ಮಿಶ್ರಣವನ್ನು ಬೆಳೆಯ ಸುಳಿಗೆ ಬೀಳುವಂತೆ ಸಿಂಪಡಿಸಬೇಕು. ಮೊದಲ ಸಿಂಪರಣೆಯನ್ನು ಬಿತ್ತನೆಯಾದ 15-20 ದಿನದೊಳಗೆ ತೆಗೆದುಕೊಳ್ಳಬೇಕು ಹಾ ಎರಡನೇ ಸಿಂಪರಣೆಯನ್ನು ಮೊದಲನೆ ಸಿಂಪರಣೆಯ 10 ರಿಂದ 15 ದಿನಗಳ ನಂತರ ನೀಡಬೇಕು. ಪ್ರತಿ ಸಿಂಪರಣೆಯನ್ನು ಮುಂಜಾನೆ ಅಥವಾ ಸಾಯಂಕಾಲದ ಸಮಯದಲ್ಲಿ ಕೈಗೊಳ್ಳಬೇಕು. ಪ್ರತಿ ಸಲವು ಒಂದೇ ತೆರನಾದ ಕೀಟನಾಶಕಗಳನ್ನು ಸಿಂಪರಣೆ ಮಾಡಬಾರದು ಎಂದು ಅಧಿಕಾರಿಗಳು ಹೇಳಿದ್ದಾರೆ.

### ಆತಂಕ ಸೃಷ್ಟಿಸಿದ ಕೇದಿಗೆ ರೋಗ

ಮುಸುಕಿನ ಜೋಳಕ್ಕೆ ಬರುವ ರೋಗಗಳಲ್ಲಿ ಕೇದಿಗೆ ರೋಗ (ಬೂಜು ರೋಗ) ಅತ್ಯಂತ ಪ್ರಮುಖ ರೋಗ. ಇದು ಬೂಷ್ಟು ಜಾತಿಗೆ ಸೇರಿದ ಶಿಲೀಂಧ್ರದಿಂದ ಉಂಟಾಗುವ ಅಂತರವ್ಯಾಪಿ ರೋಗ. ತಡವಾಗಿ ಬಿತ್ತನೆ ಮಾಡಿದ (ಆಗಸ್ಟ್ ನಂತರದ) ತಾಖುಗಳಲ್ಲಿ ಈ ರೋಗದ ಹಾವಳಿ ಹೆಚ್ಚು. ರೋಗದ ತೀವ್ರತೆ ಜಾಸ್ತಿ ಇದ್ದಾಗ ಶೇ.80-90ರಷ್ಟು ಬೆಳೆ ನಷ್ಟವಾಗುತ್ತದೆ.

ಈ ರೋಗವು ಪರೆನೋಸ್ಪೀರೋಸ್ಪೋರ ಸೋರ್ಗೈ ಶಿಲೀಂಧ್ರದಿಂದ ಬರುತ್ತದೆ. ಬೆಳೆಯು ಸುಮಾರು 20 ರಿಂದ 25 ದಿನಗಳ ಸಸಿ ಹಂತದಲ್ಲಿರುವಾಗ ರೋಗದ ಚಿನ್ಹೆಗಳು ಪ್ರಾರಂಭವಾಗುತ್ತವೆ. ತಂಪಾದ ವಾತಾವರಣವಿದ್ದಾಗ ರೋಗ ತಗುಲಿದ ಗಿಡಗಳ ಎಲೆಗಳ ತಳ ಮತ್ತು ಮೇಲ್ಭಾಗದಲ್ಲಿ ಬಿಳಿ ಬಣ್ಣದ ಹತ್ತಿಯಂತಹ ಶಿಲೀಂಧ್ರದ ಪುಡಿ ಕಾಣಿಸಿಕೊಳ್ಳುತ್ತದೆ. ನಂತರ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಇಡೀ ಎಲೆಯನ್ನು ಆವರಿಸುತ್ತದೆ. ಹೀಗೆ ರೋಗಗ್ರಸ್ಥ ಗಿಡಗಳ ಬೆಳವಣಿಗೆ ತೀವ್ರವಾಗಿ ಕುಂಠಿತಗೊಂಡು ಎಲೆಗಳು ಹಳದಿ ವರ್ಣಕ್ಕೆ ಮಾರ್ಪಾಡಾಗುತ್ತವೆ. ರೋಗಬಾಧೆ ಹೆಚ್ಚಾದಂತೆಲ್ಲಾ ಎಲೆಯ ಮೇಲೆ ಕಂದು ಬಣ್ಣದ ಗೆರೆಗಳು ಮಧ್ಯದ ದಿಂಡಿಗೆ ಸಮಾನಾಂತರವಾಗಿ ಕಾಣಿಸಿಕೊಳ್ಳುತ್ತವೆ. ರೋಗ ತಗುಲಿದ ಗಿಡಗಳಲ್ಲಿ ತೆನೆಗಳು ಬಿಡುವುದಿಲ್ಲ. ರೋಗಗ್ರಸ್ಥ ಭೂಮಿಯಲ್ಲಿ ಬಿತ್ತನೆ ಮಾಡಿದಾಗ ಶಿಲೀಂಧ್ರದ ಬೀಜಾಣುಗಳು ಬೀಜಕ್ಕೆ ಅಂಟಿಕೊಂಡು ಬೀಜದ ಜೊತೆಯಲ್ಲಿ ಸೇರಿ ಸಸ್ಯ ಅಂತರವ್ಯಾಪಿ ರೋಗದ ಲಕ್ಷಣಗಳನ್ನು ತೋರಿಸುತ್ತದೆ.

ಹತೋಟಿ ಕ್ರಮಗಳು: ಪ್ರತಿ ಕಿ.ಗ್ರಾಂ. ಬೀಜಕ್ಕೆ 3.0 ಗ್ರಾಂ ಮೆಟಾಲಾಕ್ಸಿ ಲ್+ಮ್ಯಾಂಕೋಜೆಬ್ ಸಂಯುಕ್ತ ಅಂತರ್‌ವ್ಯಾಪಿ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಬೇಕು. ಬಿತ್ತನೆ ಮಾಡಿದ 25 ದಿನಗಳ ನಂತರದಲ್ಲಿ ಅಜೋಸ್ಟ್ರೋಬಿನ್+ಡೈಫೆನೊಕೊನೋಜೋಲ್ ಪ್ರತಿ ಲೀಟರ್ ನೀರಿಗೆ 1 ಮಿ.ಲಿ. ಪ್ರಮಾಣದಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಶಿಫಾರಸ್ಸು ಮಾಡಿರುವ ಅಂತರದಲ್ಲಿ ಬಿತ್ತನೆ ಮಾಡಬೇಕು. ತಾಕುಗಳಲ್ಲಿ ಹೆಚ್ಚಿಗೆ ತೇವಾಂಶವಿರದಂತೆ ಎಚ್ಚರ ವಹಿಸಬೇಕು. ತಾಕುಗಳಲ್ಲಿ ಅಲ್ಲಲ್ಲಿ ಕೇದಿಗೆ ರೋಗ ಕಂಡ ಕೂಡಲೇ ರೋಗಗ್ರಸ್ಥ ಗಿಡಗಳನ್ನು ಬೇರು ಸಹಿತ ಕಿತ್ತು ನಾಶ ಮಾಡಬೇಕು.

# ಶ್ರಮದಾನದಿಂದ ಸ್ವಚ್ಛತೆ ಕಾಪಾಡಿ: ಮೋಹನ್



ಆಲೂರು: ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹುಣಸವಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಮೋಹನ್ ತಿಳಿಸಿದರು.

ಹಾಸನ ನವ್ ಕಿಸ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ತಾಲ್ಲೂಕಿನ ಮಾವನೂರು ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯ ಹಾಗೂ ಭರತವಳ್ಳಿ ಪ್ರಾಥಮಿಕ ಶಾಲಾ ಅವರಣವನ್ನು ಸ್ವಚ್ಛಗೊಳಿಸುವ ಶ್ರಮದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಂದಿನ ಪೀಳಿಗೆಗೆ ಉತ್ತಮ ಗಾಳಿ ನೀರು ಆಹಾರ ಮತ್ತು ಉತ್ತಮ ಆರೋಗ್ಯಕ್ಕಾಗಿ ನಾವೆಲ್ಲರೂ ಪರಿಸರ ಸ್ವಚ್ಛತೆ ಕಾಪಾಡಬೇಕು ಪ್ಲಾಸ್ಟಿಕ್ ಮುಕ್ತ ಗ್ರಾಮದ ಬಗ್ಗೆ ತಿಳಿಸುವ ಮೂಲಕ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಹಾಸನ ನವಕೀಸ್ ಕಾಲೇಜಿನ ವಿದ್ಯಾರ್ಥಿಗಳು ಮುಂದಾಗಿರುವುದು ಸಂತಸವಾಗಿದೆ. ಸ್ವಚ್ಛತೆ ಇದ್ದರೆ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬಹುದು. ಪ್ರತಿಯೊಬ್ಬರೂ ತಮ್ಮ ಮನೆ ಪರಿಸರದಲ್ಲಿರುವ ಚರಂಡಿಯನ್ನು ಆಗಾಗ ಶುದ್ಧ ಮಾಡಿಕೊಂಡರೆ ಸೊಳ್ಳೆಗಳ ಸಂತತಿ ಉತ್ಪತ್ತಿಯನ್ನು ತಡೆಯಬಹುದು. ಸಾಧ್ಯವಾದಷ್ಟು ಮನೆಗಳ ಆಸುಪಾಸಿನಲ್ಲಿ ಇನ್ನಿತರೆ ವಸ್ತುಗಳಲ್ಲಿ ನೀರು ನಿಲ್ಲದಂತೆ ಪ್ರತಿಯೊಬ್ಬರೂ ಜಾಗ್ರತೆ ವಹಿಸಬೇಕು.

ಶ್ರಮದಾನ ಮಾಡುತ್ತಿರುವ ವಿದ್ಯಾರ್ಥಿಗಳ ಶ್ರಮಾದಾನ ಎಂದಿಗೂ ವ್ಯರ್ಥವಾಗಬಾರದು. ಇವರು ನೀಡುವ ಸಲಹೆಗಳನ್ನು ಪ್ರತಿಯೊಬ್ಬರೂ ಅರಿತು ಆರೋಗ್ಯವಂತ ಸಮಾಜ ನಿರ್ಮಾಣ ಮಾಡೋಣ ಎಂದರು.

# ಸರ್ಕಾರದ ಸವಲತ್ತು ಸದ್ಬಳಕೆಯಾಗಲಿ: ರೇವಣ್ಣ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಸರ್ಕಾರ ನೀಡಿರುವ ಸವಲತ್ತುಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದಿಂದ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಗರ ಪ್ರದೇಶದ ಕಾಲೇಜುಗಳಿಗೆ ಹೋಗದಂತೆ, ಸ್ಥಳೀಯವಾಗಿಯೇ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ನಡೆಸಲು ಸರ್ಕಾರದಿಂದ ಸಾಕಷ್ಟು ಅನುದಾನ ತಂದು ಶಿಕ್ಷಣಕ್ಕೆ ಒತ್ತುಕೊಟ್ಟಿದ್ದೇನೆ. ಸಕಲ ಸವಲತ್ತು ಒದಗಿಸಲಾಗಿದೆ. ಉತ್ತಮ ಉಪನ್ಯಾಸಕರು ಕಾಳಜಿ ವಹಿಸಿ ಬೋಧಿಸುವ ಬಗ್ಗೆ ಪ್ರಶಂಸೆ ಇದೆ. ವಿದ್ಯಾರ್ಥಿನಿಯರು ಸದ್ಬಳಕೆ ಮಾಡಿಕೊಳ್ಳಲು ಶ್ರಮಿಸಬೇಕು ಎಂದರು.

ಪ್ರಾಂಶುಪಾಲ ಕೆ.ಗುರುರಾಜ್ ಮಾತನಾಡಿ, ಮಕ್ಕಳು ಏಕಾಗ್ರತೆವಹಿಸಿ ಉತ್ತಮ ಕಲಿಕೆಗೆ ಅಭ್ಯಾಸ ನಡೆಸಬೇಕು. ಉಪನ್ಯಾಸಕರ ಬೋಧನೆಯಲ್ಲಿ ಆಸಕ್ತಿವಹಿಸಬೇಕು ಆಗ ಮಾತ್ರ ಉಪನ್ಯಾಸಕರಿಗೆ ಬೋಧಿಸಲು ಉತ್ಸಾಹ ದೊರಕುತ್ತದೆ. ನಿಮ್ಮಗಳ ಭವಿಷ್ಯ ಉತ್ತಮವಾಗಿಯರಲು ಶ್ರಮ ವಹಿಸಿ ಎಂದರು.

ಸಾಹಿತಿ ನಾಗೇಶ್ ಕೌಂಡಿನ್ಯ ಮಾತನಾಡಿ, ಕಷ್ಟ ಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿ. ನಿಮ್ಮ ಉಪನ್ಯಾಸಕರನ್ನು ಆದರ್ಶವಾಗಿಟ್ಟುಕೊಂಡು ಕಥೆ, ಕವನ, ಲೇಖನ ಬರಹಗಳನ್ನು ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕಳೆದ ಸಾಲಿನ ಕ್ರೀಡಾ ಚಟುವಟಿಕೆ, ಸಾಂಸ್ಕೃತಿಕ ಸ್ಪರ್ಧೆಗಳು, ಸ್ಕೌಟ್ ಆ್ಯಂಡ್ ಗೈಡ್ಸ್ ಹಾಗು ಎನ್‌ಸಿಸಿ, ಎನ್‌ಎಸ್‌ಎಸ್ ಘಟಕಗಳ ಸಮಾರೋಪ ನಡೆಸಲಾಯಿತು. ಕಾಲೇಜಿನ ಸ್ಮರಣ ಸಂಚಿಕೆಯನ್ನು ಮತ್ತು ಉಪನ್ಯಾಸಕಿ ಎಂ.ಕುಸುಮಾ ಅವರ ಕೃತಿ ಸಂವಾದಿ ಎಂಬ ಕವನ ಸಂಕಲನ ಬಿಡುಗಡೆಗೊಳಿಸಲಾಯಿತು.

ಪುರಸಭಾ ಅಧ್ಯಕ್ಷ ಹೆಚ್.ಕೆ.ಪ್ರಸನ್ನ, ನಿವೃತ್ತ ಪ್ರಾಂಶುಪಾಲ ಹೆಚ್.ಎಸ್.ಪುಟ್ಟಸ್ವಾಮಪ್ಪ, ಪ್ರೋ. ಹೆಚ್.ಎನ್.ಮಂಜುರಾಜ್, ಹಳೇ ವಿದ್ಯಾರ್ಥಿಬಳಗದ ಜೈಪ್ರಕಾಶ್, ಸಿಡಿಸಿ ಸದಸ್ಯರಾದ ಕೆ.ಶ್ರೀಧರ್, ಗೋಕುಲ್, ಹೆಚ್.ಎಸ್.ಸುದರ್ಶನ್ ಇದ್ದರು.

# ಅರ್ಜುನ ಸ್ಮಾರಕ ಉದ್ಘಾಟನೆಗೆ ಕೂಡಿಬಾರದ ಕಾಲ

## ಸರ್ಕಾರ-ಶಾಸಕರ ನಡುವೆ ಸಂಘರ್ಷ | ಹೆಚ್ಚಿನ ಅನುದಾನಕ್ಕೆ ಪಟ್ಟು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಕಲೇಶಪುರ ತಾಲ್ಲೂಕು ಯಸಳೂರು ಅರಣ್ಯ ವ್ಯಾಪ್ತಿಯ ದಬ್ಬಳಿಕಟ್ಟೆ ಬಳಿ ಕಾಡಾನೆ ಜೊತೆಗಿನ ಕಾದಾಟದಲ್ಲಿ ವೀರ ಮರಣವಪ್ಪಿದ ಕ್ಯಾಪ್ಟನ್ ಖ್ಯಾತಿಯ ಸಾಕಾನೆ ಅರ್ಜುನನಿಗೆ ಸಾವಿಗೀಡಾದ ಸ್ಥಳದಲ್ಲಿ ಸ್ಮಾರಕ ನಿರ್ಮಿಸಲಾಗಿದೆಯಾದರೂ ಅದರ ಉದ್ಘಾಟನೆಗೆ ಮಾತ್ರ ಸಮಯ ಕೂಡಿಬರುತ್ತಿಲ್ಲ.

ಕ್ಷೇತ್ರ ಶಾಸಕ ಸಿಮೆಂಟ್ ಮಂಜು ಹಾಗೂ ರಾಜ್ಯ ಸರ್ಕಾರದ ನಡುವಿನ ಮುಸುಕಿನ ಗುದ್ದಾಟ ಅರ್ಜುನನ ಅಭಿಮಾನಿಗಳಿಗೆ ಬೇಸರ ಮೂಡಿಸಿದೆ. ಈಗಾಗಲೇ ಎರಡು ಬಾರಿ ಅರ್ಜುನ ಸ್ಮಾರಕ ಉದ್ಘಾಟನೆ ಕಾರ್ಯಕ್ರಮ ಮುಂದೂಡಲಾಗಿದೆ. ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಿ ಪ್ರತಿಮೆ ಅನಾವರಣಗೊಳಿಸಲಿ ಎಂದು ಶಾಸಕ ಸಿಮೆಂಟ್‌ಮಂಜು ಪಟ್ಟು ಹಿಡಿದಿದ್ದಾರೆ. ಈಗಾಗಲೇ ಸರ್ಕಾರ ಅರ್ಜುನ ಸ್ಮಾರಕ ನಿರ್ಮಾಣಕ್ಕೆ ಬೇಕಾದ ಅಗತ್ಯ ಅನುದಾನ ನೀಡಿದೆ. ಇದರಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಮುಂದಿನ ತಿಂಗಳು ಉದ್ಘಾಟನೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ಹೀಗಾಗಿ ಮೂರನೇ ಬಾರಿಗೆ ಅರ್ಜುನನ ಸ್ಮಾರಕ ಉದ್ಘಾಟನೆ ನೆನೆಗುದಿಗೆ ಬೀಳಲಿದೆಯಾ ಎಂಬ ಅನುಮಾನ ಕಾಡುತ್ತಿದೆ.



2023ರ ಡಿ. 4 ರಂದು ಕಾಡಾನೆಯೊಂದಿಗೆ ಕಾದಾಡಿ ಕ್ಯಾಪ್ಟನ್ ಅರ್ಜುನ ವೀರ ಮರಣವನ್ನಪ್ಪಿತ್ತು. ಮೃತಪಟ್ಟ ಸ್ಥಳದಲ್ಲೇ ಅರ್ಜುನನ ಅಂತ್ಯಸಂಸ್ಕಾರ ನೆರವೇರಿಸಲಾಗಿತ್ತು. ಇದೇ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ಮಾಡುವುದಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಘೋಷಣೆ ಮಾಡಿದ್ದರು. ಆದರೆ, ಸ್ಥಳೀಯ ಶಾಸಕ ಸಿಮೆಂಟ್ ಮಂಜು ಅವರು 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿ ಪ್ರವಾಸಿ ತಾಣವನ್ನಾಗಿ ಮಾಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದರು.

ಇದೀಗ ಕೇವಲ 20 ಲಕ್ಷರೂ. ವೆಚ್ಚದಲ್ಲಿ ಅರ್ಜುನನ ಸ್ಮಾರಕ ನಿರ್ಮಾಣ ಮಾಡಿ ಎರಡು ಬಾರಿ ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು.

### ಸರ್ಕಾರ-ಶಾಸಕರ ನಡುವೆ ಸಂಘರ್ಷ

ಅರ್ಜುನನ ಸ್ಮಾರಕ ಲೋಕಾರ್ಪಣೆ ವಿಷಯದಲ್ಲಿ ಸರ್ಕಾರ ಹಾಗು ಶಾಸಕರ ನಡುವೆ ಸಂಘರ್ಷ ಮುಂದುವರೆದಿರುವಾಗಲೇ ಮುಂದಿನ ತಿಂಗಳು ಅರ್ಜುನನ ಸ್ಮಾರಕ ಉದ್ಘಾಟನೆ ಮಾಡುವುದಾ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ವಿಶ್ವವಿಖ್ಯಾತ ಮೈಸೂರು ದಸಾರದಲ್ಲಿ ಎಂಟು ಬಾರಿ ಅಂಬಾರಿ ಹೊತ್ತಿರುವ ಹಾಗೂ ಕಾಡಾನೆ, ಚಿರತೆ ಸೆರೆ ಕಾರ್ಯಾಚರಣೆಯಲ್ಲಿ ರಾಜ್ಯ ಮಾತ್ರವಲ್ಲದೆ ಹೊರ ರಾಜ್ಯಗಳಲ್ಲೂ ಅರ್ಜುನ ಪ್ರಮುಖ ಪಾತ್ರ ವಹಿಸಿದೆ.

ಸರ್ಕಾರ ಹಾಗೂ ಶಾಸಕರ ನಡುವಿನ ತಿಕ್ಕಾಟದಿಂದ ಅರ್ಜುನನ ಸ್ಮಾರಕ ಉದ್ಘಾಟನೆ ಕಾರ್ಯಕ್ರಮ ಎರಡು ಬಾರಿಗೆ ಮುಂದೂಡಿಕೆ ಆಗಿದ್ದು, ಸಾರ್ವಜನಿಕರು ಹಾಗೂ ಅರ್ಜುನನ ಅಭಿಮಾನಿಗಳಿಗೆ ತೀವ್ರ ಬೇಸರ ತರಿಸಿದೆ. ಮುಂದೆಯಾದರೂ ಸರ್ಕಾರ ಹಾಗೂ ಅರಣ್ಯ ಸಚಿವರು ವಿವಾದಕ್ಕೆ ಎಡೆಮಾಡಿಕೊಡದೆ ವೀರಮರಣವನ್ನಪ್ಪಿದ ಅರ್ಜುನನ ಸ್ಮಾರಕ ಲೋಕಾರ್ಪಣೆ ಮಾಡಿ ಗೌರವ ಸಲ್ಲಿಸಲಿ. ಆನಂತರ ಅಗತ್ಯವಿರುವ ಸೌಲಭ್ಯ ಕಲ್ಪಿಸಲಿ ಎಂದು ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ಆದರೆ, ಸ್ಥಳೀಯ ಶಾಸಕ ಸಿಮೆಂಟ್ ಮಂಜು ಅರ್ಜುನನ ಸ್ಮಾರಕ ಉದ್ಘಾಟನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಪ್ರತಿಮೆ ಲೋಕಾರ್ಪಣೆಗೊಂಡರೆ ನೂರಾರು ಮಂದಿ ಬರುತ್ತಾರೆ. ಕಾಡಿನೊಳಗೆ ಪ್ರತಿಮೆ ನೋಡಲು ಹೋಗಬೇಕಾಗಿರುವುದರಿಂದ ಕಾಡಾನೆಗಳು ದಾಳಿ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಕನಿಷ್ಠ ಮೂಲಭೂತ ಸೌಕರ್ಯ, ಭದ್ರತೆ ಒದಗಿಸದೆ ಲೋಕಾರ್ಪಣೆ ಮಾಡಲು ಬಿಡವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಹೀಗಾಗಿ ಅರ್ಜುನನ ಸ್ಮಾರಕ ಲೋಕಾರ್ಪಣೆಗೆ ತೊಡಕುಂಟಾಗಿದೆ.

# ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಹೊಳೆನರಸೀಪುರ: ಆರ್ಯವೈಶ್ಯ ಮಹಾಸಭಾ ವಾಸವಿ ಸೇವಾ ಅಕಾಡೆಮಿಯಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾ ಕಾರ್ಯದರ್ಶಿ ಎ.ಆರ್. ರವಿಕುಮಾರ್ ತಿಳಿಸಿದ್ದಾರೆ.

ಕೆಎಎಸ್, ಐಪಿಎಸ್ ಸೇರಿ ಇತರ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ವಸತಿ ಸಹಿತ ತರಬೇತಿ ನೀಡಲಾಗುತ್ತದೆ. ಆಸಕ್ತ ಅರ್ಹರು ಜುಲೈ 15ರ ಒಳಗೆ ಅರ್ಜಿ ಸಲ್ಲಿಸಬಹುದು. ಮುಂದಿನ ಸಾಲಿನ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಮಾತ್ರ ಪಾಲ್ಗೊಳ್ಳಬೇಕು. ಮಾಹಿತಿಗೆ 9663900439 ಇಲ್ಲಿಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಮೇ -16

1975: ಜಪಾನ್‌ನ ಜುನ್ಕೋ ತಾಬೇ ಎವೆರೆಸ್ಟ್ ಶಿಖರಾರೋಹಣ ಮಾಡಿದ ಮೊದಲ ಮಹಿಳೆಯಾಗಿದ್ದು, ಅದಕ್ಕೆ ಭಾರತದಲ್ಲಿ ಮತ್ತು ವಿಶ್ವಾದ್ಯಾಂತ ವಿಶೇಷ ಗಮನ ಸೆಳೆಯಿತು. ಭಾರತೀಯ ಹೆಣ್ಣುಮಕ್ಕಳಿಗೆ ಪ್ರೇರಣೆಯಾಗಿ ಗುರುತಿಸಲಾಯಿತು.

1996: ಅಟಲ್ ಬಿಹಾರಿ ವಾಜಪೇಯಿ ಅವರು ಮೊದಲ ಬಾರಿಗೆ ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆದರೆ ಈ ಸರ್ಕಾರ ಕೇವಲ 13 ದಿನ ಮಾತ್ರ ಉಳಿದುಕೊಂಡಿತು.

2004: ಭಾರತ ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾಯಿತು. ಯುಪಿಎ ಮೈತ್ರಿಕೂಟಕ್ಕೆ ಬಹುಮತ ಸಿಕ್ಕಿತು. ಇಂದಿರಾ ಗಾಂಧಿಯ ಪ್ರಿ-ಇನ್-ಲಾ ಸೋನಿಯಾ ಗಾಂಧಿ ಪ್ರಧಾನಮಂತ್ರಿ ಸ್ಥಾನಕ್ಕೆ ನಿರಾಕರಿಸಿದರು ಮತ್ತು ಡಾ. ಮನಮೋಹನ್ ಸಿಂಗ್ ಅವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯಾಗಿ ಮುಂದುರೆಸಿದರು.

### ಜನನ


1905: ಚೆಂಗಲ್ವರಾಯನ ಟಿ. ರಾಘವಯ್ಯ, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕೀಯ ನಾಯಕ (ಆಂಧ್ರ ಪ್ರದೇಶ).

1946: ಅರವಿಂದ್ ಅಡಿಗ, ಕವಿ ಮತ್ತು ಲೇಖಕ, ದ ವೈಟ್ ಟೈಗರ್ ಕೃತಿಗೆ ಬೂಕರ್ ಪ್ರಶಸ್ತಿ ಪಡೆದವರು.

### ಮರಣ

2013: ಆರ್. ಧರ್ಮರಾಜನ್, ಹಿರಿಯ ಹೋರಾಟಗಾರರು ಮತ್ತು ಸಾಂಸ್ಕೃತಿಕ ಚಿಂತಕರು.

# ಹಿರೀಸಾವೆ ದೊಡ್ಡ ಕೆರೆ ಏರಿ ದುರಸ್ತಿಗೆ ಕ್ರಮ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಹಿರೀಸಾವೆಯ ದೊಡ್ಡ ಕೆರೆ ಏರಿಯ ದುರಸ್ತಿ ಕಾಮಗಾರಿಯನ್ನು ತುರ್ತಾಗಿ ಮಾಡಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ರಾಜ್ಯ ಹೆದ್ದಾರಿ 8ರ ಡಿಸಿಸಿ ಬ್ಯಾಂಕ್ ಬಳಿ ನಿರ್ಮಾಣ ಮಾಡುತ್ತಿರುವ ಸೇತುವೆ ಕಾಮಗಾರಿಯನ್ನು ಬುಧವಾರ ಪರಿಶೀಲನೆ ಮಾಡಿ ಮಾತನಾಡಿದರು.

ಸಣ್ಣ ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ, ಕೆಲಸ ಮಾಡಲಾಗುವುದು. ದುರಸ್ತಿ ಕಾರ್ಯಕ್ಕೆ ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಬೇಕು ಎಂದರು.

ಸೇತುವೆ ನಿರ್ಮಾಣ ಮಾಡುವಾಗ, ಅಕ್ಕಪಕ್ಕದ ಚರಂಡಿ ನೀರು ರಾಜಕಾಲುವೆಗೆ ಸರಗವಾಗಿ ಹರಿಯುವಂತೆ ಅಗತ್ಯ ಇರುವ ಕಡೆ ಪೈಪ್ ಅಳವಡಿಸುವಂತೆ ಸೂಚಿಸಿದರು.

ಲೋಕೋಪಯೋಗಿ ಇಲಾಖೆಯ ಎಂಜಿನೀಯರ್ ಮಂಜಣ್ಣಗೌಡ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ನಿರ್ದೇಶಕ ಬೋರೇಗೌಡ, ಮುಖಂಡರಾದ ರವಿಕುಮಾರ್, ದೇವರಾಜು, ಮಂಜುನಾಥ್, ಕುಮಾರ್ ಮತ್ತಿತರರು ಇದ್ದರು.

# ಸಕಲೇಶಪುರಕ್ಕೆ ವಿಶೇಷ ಅನುದಾನಕ್ಕೆ ಮನವಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಕಲೇಶಪುರ ವಿಧಾನಸಭಾ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ರಾಜ್ಯ ಮಟ್ಟದ ದಿಶಾ ಸಮಿತಿ ಸಭೆ ಕೇಂದ್ರ, ವಲಯ/ಕೇಂದ್ರ ಪುರಸ್ಕೃತ ಯೋಜನೆಗಳ ಪರಿಶೀಲನಾ ಸಭೆಯಲ್ಲಿ ಮನವಿ ಸಲ್ಲಿಸಿದ ಶಾಸಕರು, ಮಲೆನಾಡು, ಅರೆಮಲೆನಾಡು, ಬಯಲು ಸೀಮೆ ಪ್ರದೇಶ ಹೊಂದಿರುವ ಸಕಲೇಶಪುರ ರಾಜ್ಯದ ಅಧಿಕ ವಿಸ್ತೀರ್ಣ ಹೊಂದಿರುವ ಕ್ಷೇತ್ರಗಳಲ್ಲಿ ಒಂದಾಗಿದೆ. 2024ರಲ್ಲಿ ಅತಿವೃಷ್ಟಿಯಿಂದ ಹಲವು ರಸ್ತೆ, ಸೇತುವೆ ಕೊಚ್ಚಿಕೊಂಡು ಹೋಗಿದ್ದರು ಸಹ ವಿಶೇಷ ಅನುದಾನ ಸರ್ಕಾರದಿಂದ ಸಿಕ್ಕಿಲ್ಲ. ಎತ್ತಿನಹೊಳೆ ಯೋಜನೆಯಡಿ ಅತಿ ಹೆಚ್ಚು ಹಾನಿಯುಂಟಾಗಿದ್ದರೂ ಯೋಜನೆ ವ್ಯಾಪ್ತಿಯ ಪ್ರದೇಶಗಳ ಅಭಿವೃದ್ಧಿಗೆ ಯಾವುದೇ ಅನುದಾನ ನೀಡಿಲ್ಲ. ಕ್ಷೇತ್ರದಲ್ಲಿ ಹಲವಾರು ಸಮಸ್ಯೆಗಳು ಜ್ವಲಂತವಾಗಿದೆ. ಕ್ಷೇತ್ರದಲ್ಲಿ ವೈದ್ಯರ ಕೊರತೆ ಹೆಚ್ಚಾಗಿದೆ. ವಿವಿಧ ಆರೋಗ್ಯ ಸಿಬ್ಬಂದಿ ಕೊರತೆ ಸಹ ಇದೆ. ಹೀಗಾಗಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು. ಕಂದಾಯ, ಎಆರ್‌ಟಿಓ ಸೇರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಕ್ಷೇತ್ರವು ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿದ್ದರೂ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುದಾನ ಬಿಡುಗಡೆಯಾಗಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

# ಶೈಕ್ಷಣಿಕ ಕ್ಷೇತ್ರ ಸುಧಾರಣೆಗೆ ಚುಂಚಶ್ರೀ ಮಠದಿಂದ ಶಿಕ್ಷಣ ಸಂಸ್ಥೆ

## ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ | ಅಣತಿ ಗ್ರಾಮದಲ್ಲಿ ಗೋಪುರ ಕಳಸಾರೋಹಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಂಸ್ಕಾರ ಕಲಿಸಬೇಕು. ಹಾಗಾದರೆ ಮಾತ್ರ ಬದಲಾವಣೆ ತರಲು ಸಾಧ್ಯ. ಆದಿಚುಂಚನಗಿರಿ ಮಠ ಈ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರಗಳನ್ನು ತೆರೆಯುತ್ತಿದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಅಣತಿ ಗ್ರಾಮದಲ್ಲಿ ಶ್ರೀ ರುದ್ರೇಶ್ವರಸ್ವಾಮಿಯ ನೂತನ ದೇಗುಲ ಉದ್ಘಾಟನೆ, ಶ್ರೀ ಭದ್ರಕಾಳಿದೇವಿ, ಶ್ರೀ ವಿಘ್ನೇಶ್ವರ ಹಾಗೂ ಶ್ರೀ ಬಸವೇಶ್ವರ ಸ್ವಾಮಿ ನೂತನ ವಿಗ್ರಹ ಪ್ರತಿಷ್ಠಾಪನೆ ಮತ್ತು ಗೋಪುರ ಕಳಸಾರೋಹಣ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.



ಅಣತಿ ಗ್ರಾಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಗ್ರಾಮದಲ್ಲಿರುವ ಶ್ರೀ ದಿಗಂಬರೇಶ್ವರ ದೇವಾಲಯ ಕೇವಲ ಕರ್ನಾಟಕವಲ್ಲದೆ ಇಡೀ ದೇಶದಲ್ಲಿ ತನ್ನದೇಯಾದ ಹೆಸರು ಮಾಡಿದೆ. ಗ್ರಾಮದಲ್ಲಿ ಸರಿಸುಮಾರು 28ಕ್ಕೂ ಹೆಚ್ಚು ದೇವಾಲಯಗಳು ಇರುವ ಬಗ್ಗೆ ಮಾಹಿತಿ ಪಡೆದಿದ್ದು ಎಲ್ಲಾ ದೇವಾಲಯಗಳಲ್ಲೂ ಸಮರ್ಪಕವಾಗಿ ನಿತ್ಯ ಪೂಜೆ ನಡೆಯುವಂತಾಗಲಿ. ಗ್ರಾಮದಲ್ಲಿ ಆದಿಚುಂಚನಗಿರಿ ಮಠದ ವತಿಯಿಂದ ಶಾಲೆ ತೆರೆಯಲಾಗಿದೆ. ಈ ಭಾಗದ ರೈತರ ಮಕ್ಕಳಿಗೆ ಕಡಿಮೆ ಹಣದಲ್ಲಿ ಉತ್ತಮ ಶಿಕ್ಷಣ ನೀಡಲಾಗುತ್ತಿದೆ ಎಂದು ತಿಳಿಸಿದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಆದಿಚುಂಚನಗಿರಿ ಮಠದಿಂದ ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಊಟ ಹಾಗೂ ವಸತಿ ಕಲ್ಪಿಸಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ರೈತರ ಮಕ್ಕಳಿಗೆ ಶ್ರೀಮಠದಿಂದ ಶಿಕ್ಷಣ ಸಿಗುತ್ತಿದೆ. ಕೇವಲ ರಾಜ್ಯ, ದೇಶವಲ್ಲದೆ ಹೊರದೇಶಗಳಲ್ಲೂ ಕೂಡ ಶ್ರೀಮಠದ ಶಾಖಾ ಮಠಗಳಿದ್ದು ಅಲ್ಲಿಯೂ ಮಠದ ವತಿಯಿಂದ ಸಮಾಜಮುಖಿ ಕೆಲಸಗಳಿಗೆ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವು ಆದಿಚುಂಚನಗಿರಿ ಮಠವನ್ನು ಚಿನ್ನದ ಮಠವನ್ನಾಗಿ ಮಾಡಿದರು. ಅವರ ಮಾರ್ಗದಲ್ಲೇ ಶ್ರೀ ನಿರ್ಮಲಾನಂದನಾಥ ಶ್ರೀಗಳು ನಡೆಯುತ್ತಿದ್ದಾರೆ. ಶ್ರೀಗಳು ಪೀಠಾಧಿಪತಿಗಳಾದ ನಂತರ ಅನೇಕ ಕಡೆಗಳಲ್ಲಿ ಹೊಸ ಶಾಲೆಗಳ ಪ್ರಾರಂಭ ಸೇರಿ ದೇವಾಲಯಗಳ ಜೀರ್ಣೋದ್ಧಾರಕ್ಕೂ ಕಾಯಕಲ್ಪ ನೀಡಿದ್ದಾರೆ ಎಂದರು.

ಪುರಾಣ ಪ್ರಸಿದ್ಧ ಶ್ರೀ ದಿಗಂಬರೇಶ್ವರ ಸ್ವಾಮಿ ದೇವಾಲಯಕ್ಕೆ ಶ್ರೀಗಳು ವಿಶೇಷ ಪೂಜೆ ಸಲ್ಲಿಸಿದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎ.ಸಿ. ನಾಗೇಶ್ ದಂಪತಿ ಶ್ರೀ ನಿರ್ಮಲಾನಂದನಾಥ ಶ್ರೀಗಳ ಪಾದಪೂಜೆ ನೆರವೇರಿಸಿದರು.

ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಡಾ. ಮಹೇಶ್ವರ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ತಾಲ್ಲೂಕು ಅರ್ಚಕರ ಸಂಘದ ಅಧ್ಯಕ್ಷ ಶ್ರೀಧರ್ ಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎ.ಇ. ಚಂದ್ರಶೇಖರ್, ಅಣತಿ ವೆಂಕಟೇಶ್, ಬಿ.ಟಿ.ಧರ್ಮ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248